# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-560 056.

ಸಂಖ್ಯೆ. ಎಸಿಎ-2/ವಿ.ವಿ.ಪ.ವಿ.ಸಭೆ/2022-23

ದಿನಾಂಕ: 30.11.2022

ಗೆ.

ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು-56.

ಮಾನ್ಯರೆ,

ವಿಷಯ: ದಿನಾಂಕ: 16.11.2022ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಯನ್ನು ಕಳುಹಿಸಿಕೊಡುವ ಕುರಿತು.

*****

ದಿನಾಂಕ: 16.11.2022ರಂದು ಬೆಳಗ್ಗೆ 11.30 ಗಂಟೆಗೆ ಜ್ಞಾನಭಾರತಿ ಆವರಣದ ಸನೆಟ್ ಸಭಾಂಗಣದಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಯನ್ನು, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮ 4.18ರ ಅಡಿಯಲ್ಲಿ ಈ ಪತ್ರದ ಜೊತೆ ಲಗತ್ತಿಸಿ ಕಳುಹಿಸಿ ಕೊಡಲಾಗಿದೆ.

ಈ ನಡಾವಳಿಗಳು ತಲುಪಿದ ಹದಿನಾಲ್ಕು ದಿವಸಗಳೊಳಗೆ ತಮ್ಮಿಂದ ಯಾವುದೇ ಆಕ್ಷೇಪಗಳು ಬಾರದಿದ್ದಲ್ಲಿ ಸದರಿ ನಡಾವಳಿಗಳಿಗೆ ವಿಶ್ವವಿದ್ಯಾಲಯದ ಪರಿನಿಯಮದಂತೆ ತಮ್ಮ ಸಮ್ಮತಿ ಇರುತ್ತದೆಂದು ಭಾವಿಸಲಾಗುತ್ತದೆ.

ಆದೇಶಾನುಸಾರ

30/11/22

ಕುಲಸಚಿವರು

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು, ರಾಜಭವನ, ಬೆಂಗಳೂರು-560001.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು - 01.
3. ಕುಲಪತಿಯವರು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಯವರು-ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಬೆಂಗಳೂರು — ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-56

ಸಂಖ್ಯೆ:ಎಸಿಎ-2/ಎ2/ವಿ.ವಿ.ಪ.ವಿ.ಸಭೆ/2022-23

ದಿನಾಂಕ: 30.11.2022

ದಿನಾಂಕ: 16.11.2022ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣ ಆಡಳಿತ ವಿಭಾಗದ 'ಸೆನೆಟ್ ಸಭಾಂಗಣ'ದಲ್ಲಿ ಬೆಳಗ್ಗೆ 11.30 ಗಂಟೆಗೆ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಗಳು:

**ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಡಾ. ಜಯಕರ. ಎಸ್.ಎಮ್. ಕುಲಪತಿಗಳು, ಬೆಂ.ವಿ.ಬೆಂ. | ಅಧ್ಯಕ್ಷರು |
| 2. | ಡಾ. ಕೆ.ಎ. ಮಹೇಶ್ವರಯ್ಯ, ಪ್ರಾಂಶುಪಾಲರು | ಸದಸ್ಯರು |
| 3. | ಶ್ರೀಮತಿ ಕ್ಷಮಾ ಕುಲಕರ್ಣಿ, ಪ್ರಾಂಶುಪಾಲರು | ಸದಸ್ಯರು |
| 4. | ಡಾ. ಆರ್.ಕಾವ್ಯಶ್ರೀ, ಪ್ರಾಂಶುಪಾಲರು, | ಸದಸ್ಯರು |
| 5. | ಡಾ. ಶೈಲಜ. ಎಸ್. ಪ್ರಾಂಶುಪಾಲರು, | ಸದಸ್ಯರು |
| 6. | ಶ್ರೀ ದೇವರಾಜ್. ಟಿ. ಪ್ರಾಂಶುಪಾಲರು, | ಸದಸ್ಯರು |
| 7. | ಡಾ. ಸ್ನೇಹಲತಾ ಜಿ. ನಾಡಿಗರ್, ಪ್ರಾಂಶುಪಾಲರು, | ಸದಸ್ಯರು |
| 8. | ಶ್ರೀ ವಿಶ್ವನಾಥ್. ಜೆ, ಪ್ರಾಂಶುಪಾಲರು, | ಸದಸ್ಯರು |
| 9. | ಡಾ. ಚಿತ್ರ. ಸಿ.ಎಸ್. ಪ್ರಾಂಶುಪಾಲರು, | ಸದಸ್ಯರು |
| 10. | ಡಾ. ಗುರು ಪ್ರಸಾದ್. ಬಿ.ಜಿ, ಪ್ರಾಂಶುಪಾಲರು, | ಸದಸ್ಯರು |
| 11. | ಡಾ. ರಮ್ಯ ಆರ್. ಪ್ರಾಂಶುಪಾಲರು, | ಸದಸ್ಯರು |
| 12. | ಡಾ. ಎ.ಎನ್. ವೆಂಕಟೇಶ | ಸದಸ್ಯರು |
| 13. | ಶ್ರೀ ಕೆ. ರವಿ | ಸದಸ್ಯರು |
| 14. | ಶ್ರೀ ದೊಡ್ಡೇಗೌಡ | ಸದಸ್ಯರು |
| 15. | ಡಾ. ಕೆ.ಎಸ್. ವಿಜಯಲಕ್ಷ್ಮಿ, ಪ್ರಾಧ್ಯಾಪಕರು, | ಸದಸ್ಯರು |
| 16. | ಡಾ. ಸಿ. ಸೋಮಶೇಖರ್, ಪ್ರಾಧ್ಯಾಪಕರು, | ಸದಸ್ಯರು |
| 17. | ಡಾ. ರಾಜೇಂದ್ರ ಪ್ರಸಾದ್. ಟಿ. ಪ್ರಾಧ್ಯಾಪಕರು, | ಸದಸ್ಯರು |
| 18. | ಡಾ. ಎಂ.ವಿ. ಉಷಾದೇವಿ, ಪ್ರಾಧ್ಯಾಪಕರು, | ಸದಸ್ಯರು |
| 19. | ಡಾ. ಸಿಂಥಿಯ ಮೆನೇಜಸ್, ಡೀನರು, ವಾಣಿಜ್ಯ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 20. | ಡಾ. ವಿ.ವಿ. ಸುರೇಶ್ ಬಾಬು, ಡೀನರು, ವಿಜ್ಞಾನ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 21. | ಡಾ. ಎಂ. ನಾರಾಯಣ ಸ್ವಾಮಿ, ಡೀನರು, ಶಿಕ್ಷಣ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 22. | ಡಾ. ಪಾಲ್ ವಿರ್ಯ್ಮುನ್, ಎಸ್, ಡೀನರು, ತಾಂತ್ರಿಕ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 23. | ಡಾ. ಸಿ. ನಾಗಭೂಷಣ, ಡೀನರು, ಕಲಾ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 24. | ಡಾ. ಸುರೇಶ್ ವಿ ನಾಡಗೌಡರ್, ಡೀನರು, ಕಾನೂನು ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 25. | ಶ್ರೀ ಎಲ್. ಎನ್. ಮಂಜುನಾಥ್ | ಸದಸ್ಯರು |
| 26. | ಡಾ. ತಮ್ಮಯ್ಯ ಆರ್. ಬಿ, | ಸದಸ್ಯರು |
| 27. | ಶ್ರೀಮತಿ ಕೃಪಾ ಪ್ರಕಾಶ್ | ಸದಸ್ಯರು |
| 28. | ಶ್ರೀ ಎಂ. ರಾಘವೇಂದ್ರ ಬಾಳಿಗ | ಸದಸ್ಯರು |
| 29. | ಶ್ರೀ ಜಯರಾಮ್ ವಿ.ಎಲ್. | ಸದಸ್ಯರು |
| 30. | ಗ್ರಂಥಪಾಲಕರು (ಪ್ರಭಾರ), ಬೆಂ.ವಿ.ಬೆಂ. | ಸದಸ್ಯರು |
| 31. | ನಿರ್ದೇಶಕರು (ಪ್ರಭಾರ), ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ಬೆಂ.ವಿ.ಬೆಂ. | ಸದಸ್ಯರು |
| 32. | ನಿರ್ದೇಶಕರು, ದೈಹಿಕ ಶಿಕ್ಷಣ ನಿರ್ದೇಶನಾಲಯ, ಬೆಂ.ವಿ.ಬೆಂ. | ಸದಸ್ಯರು |
| 33. | ಡಾ. ಜೆ.ಟಿ. ದೇವರಾಜು, ಕುಲಸಚಿವರು (ಮೌಲ್ಯಮಾಪನ), ಬೆಂ.ವಿ.ಬೆಂ. | ಸದಸ್ಯರು |

| | | |
|---|---|---|
| ೩೪. | ಶ್ರೀ ಅಜಿತ್ ಕುಮಾರ್ ಹೆಗ್ಡೆ, ವಿತ್ತಾಧಿಕಾರಿಗಳು, ಬೆಂ.ವಿ.ಬೆಂ. | ಸದಸ್ಯರು |
| ೩೫. | ಶ್ರೀ ಮಹೇಶ್ ಬಾಬು, ಎನ್, ಕೆ.ಎ.ಎಸ್, ಕುಲಸಚಿವರು, ಬೆಂ.ವಿ.ಬೆಂ. | ಸದಸ್ಯ ಕಾರ್ಯದರ್ಶಿ |

ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರದಿಂದ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಹೊಸದಾಗಿ ಕುಲಸಚಿವರಾಗಿ ಸ್ಥಳನಿಯುಕ್ತಿ ಹೊಂದಿರುವ ಕೆ.ಎ.ಎಸ್. ಹಿರಿಯ ಶ್ರೇಣಿ ಅಧಿಕಾರಿಯವರಾದ ಶ್ರೀ ಎನ್. ಮಹೇಶ್ ಬಾಬು ರವರನ್ನು ಸಭೆಗೆ ಪರಿಚಯಿಸಿದರು.

ಮಾನ್ಯ ಕುಲಸಚಿವರು ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರುತ್ತಾ ವಿದ್ಯಾವಿಷಯಕ ಪರಿಷತ್ತಿಗೆ ಹೊಸದಾಗಿ ನಾಮನಿರ್ದೇಶನಗೊಂಡ ಡಾ. ರಾಜೇಂದ್ರ ಪ್ರಸಾದ್. ಟಿ. ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಡಾ. ಎಂ.ವಿ. ಉಷಾದೇವಿ, ಪ್ರಾಧ್ಯಾಪಕರು, ಇತಿಹಾಸ ವಿಭಾಗ ಬೆಂ.ವಿ.ಬೆಂ ಹಾಗೂ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಾದ ಡಾ. ಶೈಲಜ. ಎಸ್., ಶ್ರೀ ದೇವರಾಜ್. ಟಿ. ಡಾ. ಸ್ನೇಹಲತಾ ಜಿ. ನಾಡಿಗರ್, ಶ್ರೀ ವಿಶ್ವನಾಥ್. ಜೆ, ಶ್ರೀಮತಿ ಚಿತ್ರ. ಸಿ.ಎಸ್, ಡಾ. ಗುರು ಪ್ರಸಾದ್. ಬಿ.ಜಿ, ಡಾ. ರಮ್ಯ ಆರ್. ಇವರುಗಳಿಗೆ ಹಾರ್ಧಿಕ ಸ್ವಾಗತವನ್ನು ಕೋರಿ ವಿದ್ಯಾವಿಷಯಕ ಪರಿಷತ್ ಸಭೆಗೆ ಪರಿಚಯಿಸಿ ಅವರುಗಳನ್ನು ಸಹ ಸ್ವಾಗತಿಸಿದರು. ಅವರು ಮುಂದುವರೆದು, ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಪ್ರೊ. ಎಂ. ಕೊಟ್ರೇಶ್, ಹಿಂದಿನ ಕುಲಸಚಿವರು, ಡಾ. ರಾಮಕೃಷ್ಣ ದಾಮ್ಲೆ, ಪ್ರಾಧ್ಯಾಪಕರು, ಹಾಗೂ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಾದ ಡಾ. ಧನಂಜಯ. ಬಿ.ಆರ್, ಡಾ. ಎಂ. ಶೈಲಜ, ಶ್ರೀಮತಿ ಸಿ.ತೇಜಸ್ವಿನಿ, ಶ್ರೀ ಹರಿಶ್ ನಾಯ್ಕ್, ಶ್ರೀಮತಿ ಪದ್ಮ ವಿ, ಡಾ. ಸಧೀರ್ ಪೈ ಕೆ.ಆರ್ ಹಾಗೂ ಶ್ರೀಮತಿ ರೇಖಾ ಡಿ.ಜಿ. ಇವರುಗಳ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿ, ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ಕುಲಪತಿಗಳನ್ನು ಕೋರಿದರು.

ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಮತ್ತೊಮ್ಮೆ ಸ್ವಾಗತಿಸಿ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಶೈಕ್ಷಣಿಕ ವಿದ್ಯಮಾನಗಳ ಬಗ್ಗೆ ಸಭೆಗೆ ಈ ಕೆಳಕಂಡ ಮಾಹಿತಿಯನ್ನು ವಿವರಿಸಿದರು.

1. ಬೆಂಗಳೂರು ವಿಶ್ವವಿದ್ಯಾಲಯದ 57ನೇ ಘಟಿಕೋತ್ಸವವನ್ನು ದಿನಾಂಕ 05ನೇ ಡಿಸೆಂಬರ್ 2022ರಂದು ಆಯೋಜಿಸಲು ಘನತವೆತ್ತ ಮಾನ್ಯ ರಾಜ್ಯಪಾಲರು ಒಪ್ಪಿಗೆ ನೀಡಿದ್ದು, ಯುಜಿಸಿಯ ಅಧ್ಯಕ್ಷರಾದ ಡಾ: ಜಗದೇಶ್‌ಕುಮಾರ್ ಅವರು ಘಟಿಕೋತ್ಸವದ ಮುಖ್ಯ ಅತಿಥಿಗಳಾಗಿ ಆಗಮಿಸಲು ಒಪ್ಪಿರುತ್ತರುತ್ತಾರೆಂದು ತಿಳಸುತ್ತಾ, ಗೌರವ ಡಾಕ್ಟರೇಟ್ (Honorary Doctorate) ಗಳನ್ನು ನೀಡುವ ಸಂಬಂಧ ಘನತವೆತ್ತ ರಾಜ್ಯಪಾಲರ ಕಚೇರಿಯಿಂದ ಸಮಿತಿಯನ್ನು ರಚಿಸಿರುವುದಾಗಿ ತಿಳಿಸಿ, ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದ್ದು, ಗಣ್ಯರ ಹೆಸರುಗಳನ್ನು ಅಂತಿಮವಾದ ನಂತರ ಸದಸ್ಯರುಗಳಿಗೆ ತಿಳಸಲಾಗುವುದೆಂದು ತಿಳಿಸಿ ಘಟಿಕೋತ್ಸವದಲ್ಲಿ ಎಲ್ಲಾ ಸದಸ್ಯರು ಪಾಲ್ಗೊಳ್ಳುವಂತೆ ಕೋರಿದರು.
2. ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನೀಡಿದ್ದ NAAC ಮಾನ್ಯತೆಯ ಅವಧಿಯು ಮುಗಿದಿದ್ದು, ಈಗಾಗಲೇ NAAC ನಿಗಧಿಪಡಿಸಿರುವ ಮಾನದಂಡಗಳನುಸಾರ ಎಲ್ಲಾ ವಿಭಾಗದ ಅಧ್ಯಾಪಕರ ಸಹಕಾರದಿಂದ SSR ಸಮಗ್ರ ವರದಿಯನ್ನು ಸಿದ್ಧಪಡಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು SSR ವರದಿಯನ್ನು ಸಧ್ಯದಲ್ಲಿಯೇ ಅಂತಿಮಗೊಳಸಲಾಗುವುದೆಂದು ತಿಳಿಸಿದರು.
3. ಕರ್ನಾಟಕ ಸರ್ಕಾರದ ಸಂಸ್ಥೆಯಾದ GTTC ಸಹಯೋಗದೊಂದಿಗೆ ಕೆಲವು ವೃತ್ತಿಪರ ಸ್ನಾತಕ ಪದವಿಗಳಾದ B.VOC./Skill Oriented ಕೋರ್ಸುಗಳನ್ನು ನಡೆಸಲು ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಪಠ್ಯಕ್ರಮಗಳು ಹಾಗೂ ಇತರೆ ಶೈಕ್ಷಣಿಕ ಅಂಶಗಳನ್ನೊಳಗೊಂಡ ಒಂದು ವಿಸ್ತೃತ ವರದಿಗಳನ್ನು ಶೀಘ್ರದಲ್ಲಿಯೇ ಅಂತಿಮಗೊಳಸಿ ಮುಂದಿನ ಶೈಕ್ಷಣಿಕ ಪರಿಷತ್ತಿನ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಲಾಗುವುದೆಂದು ತಿಳಿಸಿದರು.

ತದನಂತರ ಸಭೆಯ ಕಾರ್ಯಸೂಚಿಯನ್ನು ತೆಗೆದುಕೊಳ್ಳಲಾಯಿತು:

ವಿಷಯ ಸೂಚಿ: 1: ಬೆಂಗಳೂರು ವಿಶ್ವವಿದ್ಯಾಲಯದ 57ನೇ ವಾರ್ಷಿಕ ಘಟಿಕೋತ್ಸವದಲ್ಲಿ (ಉಪಸ್ಥಿತರಿರುವ) ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪಟ್ಟಿಗಳನ್ನು ಅನುಮೋದಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ಬೆಂಗಳೂರು ವಿಶ್ವವಿದ್ಯಾಲಯದ 57ನೇ ವಾರ್ಷಿಕ ಘಟಿಕೋತ್ಸವದಲ್ಲಿ (ಉಪಸ್ಥಿತರಿರುವ) ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪಟ್ಟಿಗಳನ್ನು ಮಂಡಿಸಿ ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆಯನ್ನು ಕೋರಿದರು.

ನಿರ್ಣಯ:

ಸುದೀರ್ಘ ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ 57ನೇ ವಾರ್ಷಿಕ ಘಟಿಕೋತ್ಸವದಲ್ಲಿ (ಉಪಸ್ಥಿತರಿರುವ) ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪಟ್ಟಿಗಳನ್ನು ವಿಶ್ವವಿದ್ಯಾಲಯದ ಪರಿನಿಯಮಾವಳಿಗಳ ಪರಿಚ್ಛೇದ 15ರಲ್ಲಿ ವಿನಿಮಯಿಸಿರುವಂತೆ ಎಲ್ಲಾ ಅಭ್ಯರ್ಥಿಗಳ ಪಟ್ಟಿಗಳನ್ನು ವಿದ್ಯಾವಿಷಯಕ ಪರಿಷತ್ತು ಪರಿಗಣಿಸಿ ಅಂಗೀಕರಿಸಿತು.

ವಿಷಯ ಸೂಚಿ: 2: ವೀರ್ ನರ್ಮದ್ ಸೌತ್ ಗುಜರಾತ್ ಯೂನಿವರ್ಸಿಟಿ ಸೂರತ್ ವಿಶ್ವವಿದ್ಯಾಲಯದಿಂದ ವರ್ಗಾವಣೆ ಬಯಸುವ ವಿದ್ಯಾರ್ಥಿಗಳಿಗೆ ವರ್ಗಾವಣೆ ಮತ್ತು ವಲಸೆ ಪ್ರಮಾಣ ಪತ್ರವನ್ನು ಪರಿಶೀಲಿಸದೇ ಪ್ರವೇಶಾನುಮೋದನೆ ನೀಡುವ ಕುರಿತು.

ಮಾನ್ಯ ಕುಲಪತಿಗಳು ವೀರ್ ನರ್ಮದ್ ಸೌತ್ ಗುಜರಾತ್ ಯೂನಿವರ್ಸಿಟಿ ಸೂರತ್ ವಿಶ್ವವಿದ್ಯಾಲಯದಿಂದ ವರ್ಗಾವಣೆ ಬಯಸುವ ವಿದ್ಯಾರ್ಥಿಗಳಿಗೆ ವರ್ಗಾವಣೆ ಮತ್ತು ವಲಸೆ ಪ್ರಮಾಣ ಪತ್ರವನ್ನು ಪರಿಶೀಲಿಸದೇ ಪ್ರವೇಶಾನುಮೋದನೆ ನೀಡುವ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.

ಸದಸ್ಯರಾದ ಶ್ರೀ ರವಿಯವರು ಮಾತನಾಡಿ, ಅನ್ಯ ರಾಜ್ಯದ ವಿದ್ಯಾರ್ಥಿಗಳಿಗೆ ವರ್ಗಾವಣೆ ಮತ್ತು ವಲಸೆ ಪ್ರಮಾಣ ಪತ್ರವನ್ನು ಪರಿಶೀಲಿಸದೇ ಪ್ರವೇಶಾನುಮೋದನೆ ಮಾಡುವುದು ಅಷ್ಟು ಸಮಂಜಸವಲ್ಲವೆಂದು ತಿಳಿಸಿದರು. ಸದಸ್ಯರಾದ ಪ್ರೊ: ಸುರೇಶ್ ವಿ. ನಾಡಗೌಡರ್ ಅವರು ಮಾತನಾಡಿ Eligibility ಪರಿಶೀಲಿಸದೇ ಈ ತರಹದ ಪ್ರಕರಣಗಳನ್ನು ಪರಿಗಣಿಸುವುದು ಸೂಕ್ತವಲ್ಲ, ಇದರಿಂದ ಕಾನೂನಿನ ತೊಡಕುಂಟಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಸದಸ್ಯರಾದ ಪ್ರೊ: ವಿ.ವಿ. ಸುರೇಶ್‌ಬಾಬುರವರು ಮಾತನಾಡಿ ಯುಜಿಸಿಯು ಒಬ್ಬ ವಿದ್ಯಾರ್ಥಿಯು ಎರಡು ಪದವಿಗಳನ್ನು (Dual Degree) ಏಕಕಾಲದಲ್ಲಿ ಅಧ್ಯಯನ ಮಾಡಲು ಅವಕಾಶವನ್ನು ಕಲ್ಪಿಸಿರುತ್ತದೆ. ಆದರೆ ವಿದ್ಯಾರ್ಥಿಯ ವರ್ಗಾವಣೆ ಪ್ರಮಾಣ ಪತ್ರವನ್ನು ವಿದ್ಯಾರ್ಥಿಯು ಒಂದು ಕಡೆ ನೀಡಲು ಮಾತ್ರ ಸಾಧ್ಯವಾಗುತ್ತದೆ ಎಂದು ತಿಳಿಸಿ ನಿಯಮಾವಳಿಯನ್ನು ರೂಪಿಸುವ ಸಂದರ್ಭದಲ್ಲಿ ಸಂಜೆ ಕಾಲೇಜಿನ ವಿದ್ಯಾರ್ಥಿಗಳನ್ನು ಗಮನದಲ್ಲಿಡಬೇಕಾಗುತ್ತದೆ ಎಂದರು. ಪ್ರೊ: ಸುರೇಶ್ ವಿ. ನಾಡಗೌಡರ್ ಅವರು ಈ ಕುರಿತು ಪರಿನಿಯಮಾವಳಿ (Statutes) ರಚಿಸಿಕೊಳ್ಳುವುದು ಸೂಕ್ತವೆಂದು ಸಲಹೆ ನೀಡಿದರು.

ಸದಸ್ಯರಾದ ಶ್ರೀ ಕೆ.ಎಂ. ಮಹೇಶ್ವರಯ್ಯ ರವರು ಮಾತನಾಡಿ ವಿದ್ಯಾರ್ಥಿಯು ಎರಡು ಪದವಿಗಳನ್ನು ಏಕಕಾಲದಲ್ಲಿ ಪೂರ್ಣಗೊಳಿಸಲು ಕಷ್ಟವಾಗುತ್ತದೆ, ಈ ಕುರಿತು ಅಗತ್ಯ ನಿಯಮ ರೂಪಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಮಾನ್ಯ ಕುಲಪತಿಗಳು ಮಾತನಾಡಿ ಆನ್‌ಲೈನ್‌ನ ಮೂಲಕ ವಿದ್ಯಾರ್ಥಿಯು ಪದವಿಗಳನ್ನು ಅಭ್ಯಸಿಸಲು ಅವಕಾಶವಿರುತ್ತದೆ ಎಂದು ಉತ್ತರಿಸಿದರು.

ಮಾನ್ಯ ಸದಸ್ಯರಾದ ಪ್ರೊ: ಸಿಂಥಿಯ ಮೆನೆಜಸ್‌ರವರು ಮಾತನಾಡಿ ಈಗಾಗಲೇ ತಮ್ಮ ವಿಭಾಗದಲ್ಲಿ ಎರಡು ವರ್ಷದ ಎಂ.ಬಿ.ಎ. evening ಕೋರ್ಸು ಅಸ್ತಿತ್ವದಲ್ಲಿದ್ದು ಮೂರು ಶೈಕ್ಷಣಿಕ ವರ್ಷಗಳಿಂದ ಯಶಸ್ವಿಯಾಗಿ ನಡೆಸಲಾಗುತ್ತಿದೆ. ವಿಷಯದ ಕುರಿತು ಸಮಿತಿಯನ್ನು ರಚಿಸುವ ಸಂದರ್ಭದಲ್ಲಿ ತಮ್ಮನ್ನೂ ಸಹ ಸಮಿತಿಯ ಸದಸ್ಯರನ್ನಾಗಿ ನೇಮಿಸಿಕೊಳ್ಳಲು ಮನವಿ ಮಾಡಿದರು.

ಸದಸ್ಯರಾದ ಪ್ರೊ.ಸುರೇಶ್ ವಿ. ನಾಡಗೌಡರ್ ಅವರು ಯುಜಿಸಿ ಮಾರ್ಗಸೂಚಿಯ ಅನುಸಾರ ವಿಶ್ವವಿದ್ಯಾಲಯದಲ್ಲಿ ಒಂದು ವಿಸ್ತೃತವಾದ ವಿನಿಯಮಗಳನ್ನು ರಚಿಸಿಕೊಳ್ಳುವುದು ಸೂಕ್ತವೆಂದು ಪುನರುಚ್ಚಿಸಿದರು.

<u>ನಿರ್ಣಯ:</u>

ಸುಧೀರ್ಘ ಚರ್ಚೆಯ ನಂತರ, ಸದಸ್ಯರಾದ ಪ್ರೊ.ಸುರೇಶ್ ವಿ. ನಾಡಗೌಡರ್ ಅವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸಮಿತಿಯನ್ನು ರಚಿಸಲು ನಿರ್ಣಯಿಸಿತು.

1. ಪ್ರೊ.ಸುರೇಶ್ ವಿ. ನಾಡಗೌಡರ್, ಡೀನರು, ಕಾನೂನು, ನಿಕಾಯ ಹಾಗೂ ಪ್ರಾಂಶುಪಾಲರು .. ಅಧ್ಯಕ್ಷರು
2. ಪ್ರೊ: ವಿ.ವಿ. ಸುರೇಶ ಬಾಬು, ಡೀನರು, ವಿಜ್ಞಾನ ನಿಕಾಯ .. ಸದಸ್ಯರು
3. ಪ್ರೊ: ಸಿಂಥಿಯ ಮೆನೆಜಸ್, ಡೀನರು, ವಾಣಿಜ್ಯ ನಿಕಾಯ .. ಸದಸ್ಯರು
4. ಪ್ರೊ: ಸಿ. ನಾಗಭೂಷಣ, ಡೀನರು, ಕಲಾ ನಿಕಾಯ .. ಸದಸ್ಯರು
5. ಡಾ: ರಾಘವೇಂದ್ರ ಬಾಳಿಗ, ವಿದ್ಯಾವಿಷಯ ಪರಿಷತ್ತಿನ ಸದಸ್ಯರು .. ಸದಸ್ಯರು
6. ಅಧೀಕ್ಷಕರು, ಶೈಕ್ಷಣಿಕ ಶಾಖೆ-1, ಸಂಚಾಲಕರು.

<u>ವಿಷಯ ಸೂಚಿ: 3:</u> ಬೆಂಗಳೂರು ಪದ್ಮಶ್ರೀ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್‌ನ ಆಡಳಿತ ಮಂಡಳಿಯ ಬದಲಾವಣೆಯ ಬಗ್ಗೆ.

<u>ನಿರ್ಣಯ:</u>

ಪದ್ಮಶ್ರೀ ಚಾರಿಟಬಲ್ ಟ್ರಸ್ಟ್, ಬೆಂಗಳೂರು ಇದರ ಆಡಳಿತಕೊಳಪಟ್ಟ ಪದ್ಮಶ್ರೀ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಸೈನ್ಸ್, ಕೊಮ್ಮಘಟ್ಟ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು 560056 ರಲ್ಲಿ ಅಸ್ತಿತ್ವದಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜನೆಗೊಳಪಟ್ಟ ಕೋರ್ಸುಗಳನ್ನು ಇದರ ಅಂಗಸಂಸ್ಥೆಯ ಆಡಳಿತ ಮಂಡಳಿಯಾದ ಟಿ.ಕೆ. ನಾರಾಯಣಪ್ಪ ಫೌಂಡೇಶನ್, ಬೆಂಗಳೂರು ಇದರೊಂದಿಗೆ ಕ್ರೋಢೀಕರಿಸಲು ಹಾಗೂ ಮುಂದುವರೆಸುವ ಪ್ರಸ್ತಾವನೆಯನ್ನು ಕೆ.ಎಸ್.ಯು ಅಧಿನಿಯಮ 2000ದ ಪ್ರಕರಣ 59 (6)ರ ಅಡಿಯಲ್ಲಿ ವಿದ್ಯಾವಿಷಯಕ ಪರಿಷತ್ತು ಪರಿಗಣಿಸಿ ಅನುಮೋದಿಸಿದೆ.

ವಿಷಯ ಸೂಚಿ: 4: ಬಿ.ಎ. ಆನರ್ಸ್ ಪದವಿಯಲ್ಲಿ ಸಮಾಜಶಾಸ್ತ್ರ ವಿಷಯವನ್ನು ಸೇರ್ಪಡಿಸುವ ಬಗ್ಗೆ–ಡಾ. ಶೇಖರ, ಕಾರ್ಯದರ್ಶಿ, ಕರ್ನಾಟಕ ಸಮಾಜಶಾಸ್ತ್ರ ಸಂಘ, ಕುವೆಂಪು ವಿಶ್ವವಿದ್ಯಾಲಯ, ಇವರ ಮನವಿಯ ಕುರಿತು.

ಮಾನ್ಯ ಕುಲಪತಿಗಳು ಬಿ.ಎ. ಆನರ್ಸ್ ಪದವಿಯಲ್ಲಿ ಸಮಾಜಶಾಸ್ತ್ರ ವಿಷಯವನ್ನು ಸೇರ್ಪಡಿಸುವ ಬಗ್ಗೆ ಡಾ. ಶೇಖರ, ಕಾರ್ಯದರ್ಶಿ, ಕರ್ನಾಟಕ ಸಮಾಜಶಾಸ್ತ್ರ ಸಂಘ, ಕುವೆಂಪು ವಿಶ್ವವಿದ್ಯಾಲಯ, ಇವರ ಮನವಿಯ ಕುರಿತು ವಿದ್ಯಾವಿಷಯಕ ಪರಿಷತ್ತಿಗೆ ಸಂಕ್ಷಿಪ್ತವಾಗಿ ವಿವರಿಸಿದರು.

ನಿರ್ಣಯ:

ಚರ್ಚೆಯ ನಂತರ, ಡಾ. ಶೇಖರ, ಕಾರ್ಯದರ್ಶಿ, ಕರ್ನಾಟಕ ಸಮಾಜಶಾಸ್ತ್ರ ಸಂಘ, ಕುವೆಂಪು ವಿಶ್ವವಿದ್ಯಾಲಯ, ಇವರಿಗೆ ಪರಾಮರ್ಶನ ಟಿಪ್ಪಣಿಯಲ್ಲಿ ಉಲ್ಲೇಖಿಸಿರುವ ಅಂಶಗಳನ್ನು ವಿವರಿಸಿ ಪತ್ರವನ್ನು ಬರೆಯುವಂತೆ ನಿರ್ಣಯಿಸಲಾಯಿತು.

ವಿಷಯ ಸೂಚಿ: 5: To consider approval of the proceedings of the Faculty of Law at its meeting held on 14.10.2022.

ಮಾನ್ಯ ಕುಲಪತಿಗಳು ಮಾತನಾಡಿ, ಕಾನೂನು ನಿಕಾಯದಡಿ ಬರುವ 5 ವರ್ಷದ B.A. LL.B (Hons) ಮತ್ತು 2 ವರ್ಷದ ಸ್ನಾತಕೋತ್ತರ ಪದವಿಯಾದ LL.M. ಕೋರ್ಸುಗಳಲ್ಲಿನ ಕೆಲವು ಪಠ್ಯಕ್ರಮಗಳನ್ನು ಪರಿಷ್ಕರಿಸುವ ವಿಷಯದ ಬಗ್ಗೆ ವಿವರಣೆ ನೀಡುವಂತೆ ಕಾನೂನು ನಿಕಾಯದ ಡೀನರಾದ ಪ್ರೊ. ಸುರೇಶ್ ವಿ. ನಾಡಗೌಡರ್ ಅವರನ್ನು ಕೋರಿದರು.

ಪ್ರೊ. ಸುರೇಶ್ ವಿ. ನಾಡಗೌಡರ್ ಅವರು ಮಾತನಾಡಿ ಕಾನೂನಿನ ವಿಷಯಗಳನ್ನು ಬೋಧನೆ ಮಾಡುವಾಗ ಇತ್ತೀಚಿನ (latest) ವಿದ್ಯಮಾನಗಳ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಕೇಂದ್ರ ಸರ್ಕಾರವು ಕೆಲವು ಕಾನೂನುಗಳನ್ನು ಬದಲಾವಣೆ ಮತ್ತು ತಿದ್ದುಪಡಿ ಮಾಡಿರುವ ಹಿನ್ನೆಲೆಯಲ್ಲಿ Intellectual Property Rights Law, Labour Law, Social Security Law ಮತ್ತು Corporate Social Responsibility ಹಾಗೂ ಇತರೆ ಕಾನೂನುಗಗಳ ಪಠ್ಯಕ್ರಮಗಳನ್ನು ಪರೀಷ್ಕರಿಸಲಾಗಿದೆ ಇವುಗಳನ್ನು ಪ್ರಚಲಿತವಾಗಿ ಅಳವಡಿಸಿಕೊಳ್ಳಬೇಕಾಗಿರುವುದರಿಂದ ಎರಡೂ ಪದವಿಗಳ ಪಠ್ಯಕ್ರಮಗಳನ್ನು ಪರಿಷ್ಕರಿಸಲಾಗಿದೆ ಎಂದು ಸಭೆಗೆ ವಿವರಿಸಿ ಅನುಮೋದನೆಯನ್ನು ಕೋರಿದರು.

ಪ್ರೊ. ವಿ.ವಿ. ಸುರೇಶ್ ಬಾಬುರವರು ಮಾತನಾಡಿ, ಸದರಿ ಪರಿಷ್ಕರಣೆಯು ಪಠ್ಯಕ್ರಮಗಳಿಗೆ ಮಾತ್ರ ಸೀಮಿತವಾಗಿದೆಯೇ ಅಥವಾ Scheme/Matrix ನಲ್ಲೂ ಬದಲಾವಣೆ ಮಾಡಲಾಗಿದೆಯೇ ಎಂಬ ಬಗ್ಗೆ ವಿವರಣೆ ಕೋರಿದರು. ಪ್ರೊ. ಸುರೇಶ್ ವಿ. ನಾಡಗೌಡರ್ ಅವರು ಉತ್ತರಿಸಿ, ಪಠ್ಯಕ್ರಮಗಳಲ್ಲಿ ಮಾತ್ರ ಬದಲಾವಣೆಯನ್ನು ಮಾಡಲಾಗಿದೆಯೇ ಹೊರತು, Scheme ಅಥವಾ Matrix ನಲ್ಲಿ ಯಾವುದೇ ಬದಲಾವಣೆ ಅಥವಾ ತಿದ್ದುಪಡಿ ಮಾಡಿರುವುದಿಲ್ಲವೆಂದು ಸ್ಪಷ್ಟೀಕರಿಸಿದರು.

ವಿತ್ತಾಧಿಕಾರಿಗಳಾದ ಶ್ರೀ ಅಜಿತ್ ಕುಮಾರ್ ಹೆಗ್ಡೆ ಅವರು ಮಾತನಾಡಿ ಸದರಿ ಪರಿಷ್ಕರಣೆಯ ಪಠ್ಯಗಳಲ್ಲಿ ಬ್ಯಾಂಕಿಂಗ್ ವಿಷಯದ ಪಠ್ಯಗಳಾದ Money Marketing ಪಠ್ಯವು ಸಾಂಪ್ರದಾಯಿಕ ಪಠ್ಯವಾಗಿದ್ದು, ಪ್ರಚಲಿತವಾಗಿ ಚಾಲ್ತಿಯಲ್ಲಿರುವ Banking Frauds ಬಗ್ಗೆ ಪಠ್ಯಗಳನ್ನು ರೂಪಿಸುವುದು ಅಗತ್ಯವೆಂದು ಸಲಹೆ ನೀಡಿದರು.

ಪ್ರೊ. ಸುರೇಶ್ ವಿ. ನಾಡಗೌಡರ್ ಅವರು ಉತ್ತರಿಸಿ ಈ ಕುರಿತು LL.M. ಸ್ನಾತಕೋತ್ತರ ಪದವಿಯಲ್ಲಿ ಈಗಾಗಲೇ Cyber Law ಶೀರ್ಷಿಕೆಯಡಿ ಸದರಿ ಪಠ್ಯಗಳನ್ನು ರೂಪಿಸಿದ್ದು ವಿವರವಾದ ಪಠ್ಯಕ್ರಮಗಳು ಸಹ ಇದೇ ಪರಿಷ್ಕರಣೆಯಲ್ಲಿರುತ್ತದೆ ಎಂದು ತಿಳಿಸಿದರು.

ನಿರ್ಣಯ:

ಚರ್ಚೆಯ ನಂತರ, ಕಾನೂನು ನಿಕಾಯದ ದಿನಾಂಕ: 14.10.2022ರ ಸಭೆಯ ನಿರ್ಣಯದಂತೆ, 5 ವರ್ಷದ B.A. LL.B (Hons) ಮತ್ತು 2 ವರ್ಷದ ಸ್ನಾತಕೋತ್ತರ ಪದವಿಯಾದ LL.M. ಕೋರ್ಸುಗಳಲ್ಲಿನ ಕೆಲವು ಪಠ್ಯಕ್ರಮಗಳ ಪರಿಷ್ಕರಣೆಯ ವಿಷಯವನ್ನು ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿ ಸದರಿ ಪರಿಷ್ಕೃತ ಪಠ್ಯಕ್ರಮಗಳು 2022-23ನೇ ಶೈಕ್ಷಣಿಕ ಸಾಲಿನಿಂದಲೇ ಜಾರಿಗೆ ಬರುವಂತೆ ನಿರ್ಣಯಿಸಿತು.

ವಿಷಯ ಸೂಚಿ: 6: ಸ್ವಾಯತ್ತ ಕಾಲೇಜಾದ ಬೆಂಗಳೂರಿನ ಐ.ಎಫ್.ಐ.ಎಂ. ಕಾಲೇಜಿನ ಎಂ.ಬಿ.ಎ. ಕೋರ್ಸಿನ ವಿದ್ಯಾರ್ಥಿ ಪ್ರಮಾಣದ ಹೆಚ್ಚಳದ ವಿಷಯದಲ್ಲಿ ರಚಿಸಲಾದ ಸಮಿತಿ ವರದಿಯನ್ನು ಪರಿಗಣಿಸುವ ಬಗ್ಗೆ.

ಮಾನ್ಯ ಕುಲಪತಿಗಳು ಮಾತನಾಡಿ, ಬೆಂಗಳೂರಿನ ಐ.ಎಫ್.ಐ.ಎಂ. ಕಾಲೇಜಿನ ಎಂ.ಬಿ.ಎ. ಕೋರ್ಸಿನ ವಿದ್ಯಾರ್ಥಿ ಪ್ರಮಾಣದ ಹೆಚ್ಚಳದ ವಿಷಯದಲ್ಲಿ ರಚಿಸಲಾದ ಸಿಂಡಿಕೇಟ್ ಸದಸ್ಯರಾದ ಡಾ: ಸಿ.ಆರ್. ಮಹೇಶ್‌ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಪರಿಗಣಿಸುವ ವಿಚಾರವನ್ನು ಮಂಡಿಸಿ ಅನುಮೋದನೆಯನ್ನು ಕೋರಿದರು.

ಸದಸ್ಯರಾದ ಶ್ರೀ ರವಿ ಅವರು ಮಾತನಾಡಿ, IFIM ಕಾಲೇಜಿಗೆ ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿದ ಸಂದರ್ಭದಲ್ಲಿ ವಿದ್ಯಾರ್ಥಿ ಪ್ರಮಾಣವನ್ನು 120 ರಿಂದ 180 ಕ್ಕೆ ಹೆಚ್ಚಿಸಿರುವ ಕುರಿತು ವರದಿ ಸಲ್ಲಿಸದಿರಲಿಲ್ಲವೆ ಎಂಬುದರ ಬಗ್ಗೆ ವಿವರಣೆ ನೀಡಲು ಕೋರಿದರು. ಸಮಿತಿಯ ವಿಷಯ ಪರಿಣಿತ ಸದಸ್ಯರಾದ ಪ್ರೊ:ಸಿಂಥಿಯಾ ಮೆನೆಜಸ್ ಅವರು ಎ.ಐ.ಸಿ.ಟಿ.ಇ. ಇಂದ ಈಗಾಗಲೇ ವಿದ್ಯಾರ್ಥಿ ಪ್ರಮಾಣವನ್ನು 120 ರಿಂದ 180ಕ್ಕೆ ಹೆಚ್ಚಿಸಿ ಅನುಮೋದನೆಯನ್ನು ನೀಡಿರುತ್ತದೆ. ವಿಶ್ವವಿದ್ಯಾಲಯವು ಅಲ್ಲಿನ ಭೌತಿಕ ಸೌಲಭ್ಯಗಳನ್ನು ಮತ್ತು ಹಣಕಾಸಿನ ಸ್ಥಿತಿಗತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ವಿದ್ಯಾರ್ಥಿ ಪ್ರಮಾಣವನ್ನು 120 ರಿಂದ 180ಕ್ಕೆ ಹೆಚ್ಚಿಸಿ ಶಿಫಾರಸ್ಸು ಮಾಡಿರುವ ವರದಿಯನ್ನು ನೀಡಿರುತ್ತದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಮೇಲ್ಕಂಡ ಕಾಲೇಜು ಸ್ವಾಯತ್ತಾ ಕಾಲೇಜಾದ ಕಾರಣ, ಪ್ರತಿ ವರ್ಷ ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡುವುದಿಲ್ಲ. ಪ್ರಸಕ್ತ ಸಾಲಿನಲ್ಲಿ ಎ.ಐ.ಸಿ.ಟಿ.ಯು ಎಂ.ಬಿ.ಎ. ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಿಸಿರುವುದರಿಂದ ವಿಶ್ವವಿದ್ಯಾಲಯವು ಸಮಿತಿ ರಚಿಸಿ ವರದಿ ಪಡೆದುಕೊಳ್ಳಲಾಗಿದೆಂದು ತಿಳಿದರು.

<u>ನಿರ್ಣಯ:</u>

ಚರ್ಚೆಯ ನಂತರ, ಸ್ವಾಯತ್ತ ಕಾಲೇಜಾದ ಬೆಂಗಳೂರಿನ ಐ.ಎಫ್.ಐ.ಎಂ. ಕಾಲೇಜಿಗೆ ಎಂ.ಬಿ.ಎ. ಕೋರ್ಸಿನ ವಿದ್ಯಾರ್ಥಿ ಪ್ರಮಾಣ 120ರಿಂದ 180ಕ್ಕೆ ಹೆಚ್ಚಳದ ವಿಷಯದಲ್ಲಿ ರಚಿಸಲಾದ ಸಮಿತಿ ವರದಿಯನ್ನು ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿತು.

**<u>ವಿಷಯ ಸೂಚಿ: 7:</u>** ಪ್ರೊ. ವಿ.ವಿ. ಸುರೇಶ್‌ಬಾಬು, ಪ್ರಾಧ್ಯಾಪಕರು ಮತ್ತು ಡೀನರು ವಿಜ್ಞಾನ ನಿಕಾಯ, ಬೆಂ.ವಿ.ವಿ. ಇವರ ಅಧ್ಯಕ್ಷತೆಯ ಉಪಸಮಿತಿಯು ನೀಡಿರುವ ವರದಿಯ ಬಗ್ಗೆ –

ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ನಿರ್ವಹಣಾ (M.B.A.) ವಿಭಾಗದಲ್ಲಿನ ಪಿಹೆಚ್.ಡಿ. ಸೀಟುಗಳ ಹಂಚಿಕೆಯಲ್ಲಿ ಮಾರ್ಗದರ್ಶಕರ ಆಯ್ಕೆ ಪ್ರಕ್ರಿಯೆಯಲ್ಲಿ ಆದ ಘಟನೆಗಳು, ಸಿಂಡಿಕೇಟ್‌ನಲ್ಲಿ ಆದ ಚರ್ಚೆ ಹಾಗೂ ನಿರ್ಣಯ ಹಾಗೂ ಈ ಕುರಿತು ಮಾನ್ಯ ಉಚ್ಛನ್ಯಾಯಾಲಯದಲ್ಲಿನ ಪ್ರಕರಣದಲ್ಲಾದ ತೀರ್ಪಿನ ಬಗ್ಗೆ ಮಾಹಿತಿ ನೀಡಿ ವಿಷಯವನ್ನು ವಿವರಿಸಲು ಕುಲಸಚಿವರು (ಮೌಲ್ಯಮಾಪನ)ರವರಿಗೆ ಕೋರಿದರು.

ಕುಲಸಚಿವರು (ಮೌಲ್ಯಮಾಪನ)ರವರು ಮಾತನಾಡಿ, ದಿನಾಂಕ: 17.08.2022 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ, 2019-20ನೇ ಸಾಲಿನಲ್ಲಿ ಪಿಹೆಚ್.ಡಿ ಪ್ರವೇಶಕ್ಕೆ ಜರುಗಿದ ಕೌನ್ಸಿಲಿಂಗ್‌ನಲ್ಲಿ ಎಂ.ಬಿ.ಎ ವಿಭಾಗಕ್ಕೆ ಸಂಬಂಧಿಸಿದ 4 ವಿದ್ಯಾರ್ಥಿಗಳು ತಮಗೆ ಸೀಟು ನೀಡಿರುವುದಿಲ್ಲವೆಂದು ಮತ್ತು ಉಚ್ಚ ನ್ಯಾಯಾಲಯದಿಂದ ಬಂದಿರುವ ಆದೇಶದ ಮೇರೆಗೆ ಸೀಟು ನೀಡಬೇಕೆಂದು ಕೋರಿದ್ದರಿಂದ, ವಿದ್ಯಾರ್ಥಿಗಳ ಮನವಿಯನ್ನು ಪರಿಶೀಲಿಸಿ ಉಪ ಸಮಿತಿಯು ವರದಿಯನ್ನು ನೀಡಿರುತ್ತದೆ. ಉಚ್ಛನ್ಯಾಯಾಲಯಕ್ಕೆ ಮೊರೆ ಹೋಗಿರುವ ಸಂಶೋಧನಾ ವಿದ್ಯಾರ್ಥಿಗಳು ಪಿಹೆಚ್.ಡಿ ವ್ಯಾಸಂಗ ಮಾಡಲು ಅರ್ಜಿಯನ್ನು ಸಲ್ಲಿಸಿ ದಿನಾಂಕ: 22.10.2020ರಂದು ನಡೆದ ಮೊದಲ ಸುತ್ತಿನ ಪಿಹೆಚ್.ಡಿ ನೋಂದಣಿ ಪ್ರಕ್ರಿಯೆಯಲ್ಲಿ ಹಾಜರಾಗಿರುತ್ತಾರೆ ಮತ್ತು ದಿನಾಂಕ: 20.07.2021ರಂದು 2ನೇ ಸುತ್ತಿನ ಪಿಹೆಚ್.ಡಿ ಸೀಟುಗಳ ಹಂಚಿಕೆ ಪ್ರಕ್ರಿಯೆಯನ್ನು ನಡೆಸಲಾಗಿದೆ. 2ನೇ ಸುತ್ತಿನ ನೋಂದಣಿ ಪ್ರಕ್ರಿಯೆಯಲ್ಲಿ ಸದರಿ ವಿದ್ಯಾರ್ಥಿಗಳು ಹಾಜರಾಗಿರುತ್ತಾರೆ.

ಅಂದಿನ ವಿಭಾಗದ ಅಧ್ಯಕ್ಷರು ದಿನಾಂಕ: 12.08.2021 ರಂದು ನಡೆದ ಪಿಹೆಚ್.ಡಿ. ವಿದ್ಯಾರ್ಥಿಗಳ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಜ್ಯೇಷ್ಠತಾ ಪಟ್ಟಿಯಲ್ಲಿರುವ ಈ ಕೆಳಕಂಡ 6 ವಿದ್ಯಾರ್ಥಿಗಳನ್ನು ತಾತ್ಕಾಲಿಕವಾಗಿ ಹಂಚಿಕೆ ಮಾಡಲು ಆಯ್ಕೆ ಮಾಡಿ ಕಳುಹಿಸಿರುತ್ತಾರೆಂದು ಉಪಸಮಿತಿಯ ವರದಿಯಲ್ಲಿ ತಿಳಿಸಿರುತ್ತಾರೆ.

| S.No. | Category | Rank | Candidates Name | Entrance/ Non-Entrance |
|---|---|---|---|---|
| 1 | GM | 4 | Ishwar Prasad | Entrance |
| 2 | GM | 26 | Devi M | Non-Entrance |
| 3 | GM | 5 | Anupama V K | Entrance |
| 4 | SC | 33 | Muthuraju M | Non-Entrance |
| 5 | IIA | 24 | Kishore M N | Entrance |
| 6 | IIIA | 13 | Navyashree H N | Entrance |

ಸದರಿ ಡೀನರು ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ರವರು ಪ್ರಕಟಿಸಿರುವ ಕೋರ್ಸ್‌ವರ್ಕ್‌ನ ವೇಳಾಪಟ್ಟಿಯಂತೆ, ಕೋರ್ಸ್‌ವರ್ಕ್ ತರಗತಿಗಳು ದಿನಾಂಕ: 18.08.2021 ರಿಂದ ಪ್ರಾರಂಭವಾಗಿ ಇಲ್ಲಿಯವರೆಗೆ 54 ದಿನಗಳು ಪೂರ್ಣಗೊಂಡಿರುತ್ತದೆ. ಆದ್ದರಿಂದ ಹೊಸ ಸಂಶೋಧನಾ ವಿದ್ಯಾರ್ಥಿಗಳಿಗೆ ನೋಂದಣಿ ಮಾಡಿಕೊಳ್ಳಲು ಅವಕಾಶವಿರುವುದಿಲ್ಲವೆಂದು ಮತ್ತು ಪಿಹೆಚ್.ಡಿ ಸೀಟುಗಳ ಹಂಚಿಕೆ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಸಂಶೋಧನಾ ವಿದ್ಯಾರ್ಥಿಗಳಿಗೆ ದಿನಾಂಕ: 18.08.2021 ರಿಂದ 30.12.2021ರವರೆಗೆ ಕೋರ್ಸ್‌ವರ್ಕ್ ತರಗತಿಗಳನ್ನು ನಡೆಸಲಾಯಿತು. ದಿನಾಂಕ: 17.01.2021 ರಿಂದ 27.012021ರವರೆಗೆ ಕೋರ್ಸ್‌ವರ್ಕ್ ಪರೀಕ್ಷೆಗಳನ್ನು ನಡೆಸಲಾಗಿದೆ ಮತ್ತು ಫಲಿತಾಂಶವನ್ನು ಪ್ರಕಟಿಸಲಾಗಿದೆ ಎಂದು ಸಹ ಉಪಸಮಿತಿಯ ವರದಿಯಲ್ಲಿ ತಿಳಿಸಿರುತ್ತಾರೆ. ಇಬ್ಬರು ಪ್ರಾಧ್ಯಾಪಕರುಗಳಿಗೆ 4 ಅಭ್ಯರ್ಥಿಗಳನ್ನು ಸಮವಾಗಿ ಸೀಟುಗಳ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಬಹುದಾಗಿರುತ್ತದೆ ಮತ್ತು ಸೀಟುಗಳನ್ನು ನೀಡದ್ದೆ ಆದಲ್ಲಿ ನೋಂದಣಿಯನ್ನು ಇವರುಗಳು ಶುಲ್ಕ ಪಾವತಿ ಮಾಡಿದ ದಿನಾಂಕದಿಂದ ಜಾರಿಗೆ ಬರುವಂತೆ ಆದೇಶ ನೀಡಬಹುದಾಗಿರುತ್ತದೆ. ಈ ಪ್ರಕ್ರಿಯೆಯು ಒಂದು ಬಾರಿಗೆ ಮಾತ್ರ ಅನ್ವಯವಾಗುತ್ತದೆ (One Time Measure). ಈ ವಿದ್ಯಾರ್ಥಿಗಳಿಗೆ ನೋಂದಣಿಯನ್ನು ನೀಡಿದರೆ, ಕೋರ್ಸ್‌ವರ್ಕ್ ತರಗತಿಗಳನ್ನು ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಿ ನೋಂದಣಿಯಾದ ವಿದ್ಯಾರ್ಥಿಗಳ ಜೊತೆಯಲ್ಲಿ ಕೋರ್ಸ್‌ವರ್ಕ್‌ನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಉಪಸಮಿತಿಯು ತನ್ನ ವರದಿಯಲ್ಲಿ ತಿಳಿಸಿರುತ್ತದೆ. ಉಪಸಮಿತಿಯು ತನ್ನ ವರದಿಯಲ್ಲಿ, ನಿರ್ವಹಣಾ ವಿಭಾಗದಲ್ಲಿ ಕೌನ್ಸಿಲಿಂಗ್ ಸಮಯದಲ್ಲಿ ಪಿಹೆಚ್.ಡಿ ಸೀಟುಗಳು ಭರ್ತಿಮಾಡಲಾಗಿರುತ್ತದೆ ಮತ್ತು ಯಾವುದೇ ಮಾರ್ಗದರ್ಶಕರುಗಳ ಬಳಿ ಸಂಶೋಧನಾ ಸೀಟುಗಳು ಖಾಲಿ ಇರುವುದಿಲ್ಲವೆಂದು ದಿನಾಂಕ: 08.04.2022ರಂದು ಪರೀಕ್ಷಾ ವಿಭಾಗದಿಂದ ಹಿಂಬರಹವನ್ನು ನೀಡಲಾಗಿದೆ ಎಂದು ಮತ್ತು ಸದರಿ ವಿದ್ಯಾರ್ಥಿಗಳಿಗೆ ಪಿಹೆಚ್.ಡಿ ನೋಂದಣಿಯನ್ನು ನೀಡಿದರೆ, ಲೆಕ್ಕ ಪರಿಶೋಧಕರಿಂದ ಆಕ್ಷೇಪಣೆ ಉಂಟಾಗಬಹುದು ಮತ್ತು ಬೇರೆ ನಿಕಾಯದ ವಿದ್ಯಾರ್ಥಿಗಳು ಸಹ ಕೋರಬಹುದಾಗಿರುತ್ತದೆಂದು ತಿಳಿಸಿರುತ್ತದೆ. ಮುಂದುವರೆದು,

As per the merit list under 2A category who attended the 2nd round Counselling the following details are below.

| Rank Sl.No. | Names | Category | Application.No. | Merit |
|---|---|---|---|---|
| 25 | Kishore M N | 2A | 1593 | 58.70 |
| 44 | Sudeep Kumar B | 2A | 1746 | 54.36 |
| 46 | Swapna | 2A | 391 | 53.31 |

After discussions, the Committee put forth the following resolutions commensurate with the directions of the Syndicate and the judgment of the High Court.

This is a strictly One Time Measure.

The Details of the allotment of the students is given below.

| Rank Sl.No. | Names | Application No. | Category | Name of Guide |
|---|---|---|---|---|
| 5 | Anupama V K | 3529 | OBC | Dr. Cynthia Menezes, Dept. of Mant, B.U.B |
| 46 | Swapna S | 391 | 2A | Dr. Cynthia Menezes, Dept. of Mant, B.U.B |
| 26 | Devi | 1923 | 2A | Dr. Y Nagaraju, Dept. of Mant, B.U.B |
| 35 | Muthuraja | 2105 | SC | Dr. Y Nagaraju, Dept. of Mant, B.U.B |

ಉಪಸಮಿತಿಯು ಮೇಲ್ಕಂಡಂತೆ ಶಿಫಾರಸ್ಸು ಮಾಡಿರುವ 4 ವಿದ್ಯಾರ್ಥಿಗಳಲ್ಲಿ 2ಎ ವರ್ಗದ ಅಭ್ಯರ್ಥಿಯಾದ ಸ್ವಪ್ನ ಎಸ್ ಇವರ ಜ್ಯೇಷ್ಠತೆಗಿಂತ ಅತಿ ಹೆಚ್ಚು ಅಂಕ ಪಡೆದಿರುವ ಜ್ಯೇಷ್ಠತೆಯಲ್ಲಿರುವ ಈ ಕೆಳಕಂಡ 2 ವಿದ್ಯಾರ್ಥಿಗಳಿರುತ್ತಾರೆ. ಈ ಇಬ್ಬರು ವಿದ್ಯಾರ್ಥಿಗಳು ಸ್ವಪ್ನ. ಎಸ್ ಅವರಿಗಿಂತ ರ್‍ಯಾಂಕ್ ಪಟ್ಟಿಯಲ್ಲಿ ಮೇಲಿರುತ್ತಾರೆ.

| ರ್‍ಯಾಂಕ್ | ಹೆಸರು | ವರ್ಗ | ಅರ್ಜಿ ಸಂಖ್ಯೆ | ಶೇಕಡಾವಾರು ಅಂಕ |
|---|---|---|---|---|
| 25 | ಕಿಶೋರ್ ಎಂ.ಎನ್ | 2A | 1593 | 58.70 |
| 44 | ಸುದೀಪ್ ಕುಮಾರ್ ಬಿ | 2A | 1746 | 54.36 |
| 46 | ಸ್ವಪ್ನ ಎಸ್ | 2A | 391 | 53.31 |

ನ್ಯಾಯಾಲಯಕ್ಕೆ ಮೊರೆ ಹೋಗಿರುವ 4 ವಿದ್ಯಾರ್ಥಿಗಳಿಗೆ ಪಿಹೆಚ್.ಡಿ.ಗೆ ನೋಂದಣಿ ಮಾಡಿಕೊಂಡರೆ ಯು.ಜಿ.ಸಿ ನಿಯಮಾವಳಿ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ 2016ರ ಪಿಹೆಚ್.ಡಿ ಪರಿನಿಯಮಾವಳಿಯನ್ನು ಉಲ್ಲಂಘಿಸಿದಂತಾಗಬಹುದು. ನ್ಯಾಯಾಲಯಕ್ಕೆ ಮೊರೆ ಹೋಗಿರುವ 4 ವಿದ್ಯಾರ್ಥಿಗಳಿಗೆ ಪಿಹೆಚ್.ಡಿ.ಗೆ ನೋಂದಣಿ ಮಾಡಿಕೊಂಡರೆ ಲೆಕ್ಕ ಪರಿಶೋಧಕರಿಂದ ಆಕ್ಷೇಪಣೆ ಉಂಟಾಗುತ್ತದೆ ಮತ್ತು ಬೇರೆ ನಿಖಾಯದ ವಿದ್ಯಾರ್ಥಿಗಳು ಸಹ ಕೋರಬಹುದು ಎಂದು ತಿಳಿಸಿದರು.

ಮೇಲಿನ ವಿವರಣೆಗಳನ್ನು ಕುಲಸಚಿವರು (ಮೌ)ರವರು, ಮಂಡಿಸಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿಲ್ಲ, ವಿಷಯವು ಈಗಾಗಲೇ ದಿನಾಂಕ 17.08.208.2022 ಮತ್ತು ದಿನಾಂಕ 1010.2022ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಮೇರೆಗೆ ಮತ್ತು ಸಲಹೆ ಅನುಸಾರ ಸದರಿ ವರದಿಯನ್ನು ಸಿದ್ಧಪಡಿಸಿ ವಿದ್ಯಾವಿಷಯಕ ಪರಿಷತ್ ಸಭೆಯ ಮುಂದೆ ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಈ ಮಧ್ಯೆ, ಕೆಲವು ಸಂಶೋಧನಾ ವಿದ್ಯಾರ್ಥಿಗಳು ಸಭೆಯ ಒಳಗೆ ಬಂದು, ಎಂ.ಬಿ.ಎ. ವಿಭಾಗದಲ್ಲಿನ ಪಿಹೆಚ್.ಡಿ. ಸೀಟು ಹಂಚಿಕೆಯ ವಿಚಾರವು ಈಗಾಗಲೇ ಮಾನ್ಯ ಉಚ್ಛನ್ಯಾಯಲದಲ್ಲಿ ತೀರ್ಮಾನವಾಗಿದೆ, ಹಿಂದಿನ ಕುಲಪತಿಗಳೂ ಸಹ ಇದಕ್ಕೆ ಒಪ್ಪಿಗೆ ನೀಡಿ ಸೀಟು ನೀಡಲು ಆದೇಶ ನೀಡಿದ್ದರೂ ಸಹ ವಿಶ್ವವಿದ್ಯಾಲಯ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಲಾಗುತ್ತಿದೆ. ಸಿಂಡಿಕೇಟ್‌ನಲ್ಲಿ ಕೈಗೊಂಡ ನಿರ್ಣಯವನ್ನು ಮತ್ತು ಈ ಸಭೆಗೆ ವಿಷಯವನ್ನು ಮಂಡಿಸಿದ್ದಾರೆ. ಕೂಡಲೇ ಈ ವಿದ್ಯಾರ್ಥಿಗಳಿಗೆ ಪಿಹೆಚ್.ಡಿ ಸೀಟನ್ನು ನೀಡಬೇಕು ಎಂದು ಆಗ್ರಹಿಸಿದರು.

ಮಾನ್ಯ ಕುಲಸಚಿವರು ಈ ಕುರಿತು, ವಿಷಯವು ಚರ್ಚೆಗೆ ವಿದ್ಯಾವಿಷಯಕ ಪರಿಷತ್ತಿನ ಸಭೆಯ ಮುಂದೆ ಮಂಡಿಸಲಾಗಿದೆ. ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ತದನಂತರ ವಿದ್ಯಾರ್ಥಿಗಳು ಸಭೆಯಿಂದ ನಿರ್ಗಮಿಸಿದರು.

ಸದಸ್ಯರಾದ ಪ್ರೊ: ಸಿಂಥಿಯಾ ಮೆನೆಜೆಸ್ ಅವರು ಮಾತನಾಡಿ ಪಿಹೆಚ್.ಡಿ. ಸೀಟುಗಳ ಹಂಚಿಕೆಯಲ್ಲಿ ಮಾರ್ಗದರ್ಶಕರ ಆಯ್ಕೆ ಪ್ರಕ್ರಿಯೆಯ ಸಂದರ್ಭದಲ್ಲಿ ನಿರ್ವಹಣಾ ವಿಭಾಗದಲ್ಲಿ ಒಟ್ಟು 3 ಪ್ರಾಧ್ಯಾಪಕರಿದ್ದರು, 2 ವರ್ಷ ಕಡಿಮೆ ಅವಧಿಯ ಪ್ರಾಧ್ಯಾಪಕರಿಗೆ ಪಿಹೆಚ್.ಡಿ. ಸೀಟು ನೀಡಲು ನಿಯಮಗಳಲ್ಲಿ ಅವಕಾಶವಿಲ್ಲದಿದ್ದರೂ, ಹಿಂದಿನ ಮಾನ್ಯ ಕುಲಪತಿಗಳು 7+1ರಂತೆ ಒಂದು ಬಾರಿಯ ಕ್ರಮವಾಗಿ (one time measure) ನೀಡಲು ಆದೇಶಿಸಿದ್ದರು. ಮಾರ್ಗದರ್ಶಕರ ಸಮ್ಮತಿಯ (Willingness) ಮೇರೆಗೆ ತೆಗೆದುಕೊಳ್ಳಲು ಸೂಚಿಸಲಾಗಿತ್ತು. 2 ವರ್ಷಕ್ಕಿಂತ ಕಡಿಮೆ ಸೇವಾವಧಿ ಇದ್ದ ಡಾ: ಕೆ. ಜನಾರ್ಧನಂ ಅವರು ಮೊದಲು ಒಬ್ಬ ಸಂಶೋಧನಾ ವಿದ್ಯಾರ್ಥಿ, ತದನಂತರ ಇಬ್ಬರು ಹಾಗೂ 3 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ಸಮ್ಮತಿಸಿದ್ದರು, ಅವರ ನಿಲುವಿನಲ್ಲಿ ಆಗಾಗ್ಗೆ ಬದಲಾವಣೆ ಮಾಡಿಕೊಳ್ಳುತ್ತಾ ಬಂದಿದ್ದರು ಅವರನ್ನು ಹೊರತುಪಡಿಸಿ ಕೌನ್ಸಿಲಿಂಗ್ ನಡೆಯುವ ಸಂದರ್ಭದಲ್ಲಿ ಪಿಹೆಚ್.ಡಿ. ಸೀಟುಗಳು ಖಾಲಿ ಯಾರ ಖಾತೆಯಲ್ಲೂ ಖಾಲಿ ಸಹ ಇರಲಿಲ್ಲ ಎಂದು ತಿಳಿಸಿದರು.

ಸದಸ್ಯರಾದ ಡಾ: ಮಹೇಶ್ವರಯ್ಯರವರು ಮಾತನಾಡಿ ವಿಶ್ವವಿದ್ಯಾಲಯವು ಯುಜಿಸಿ ನಿಯಮಾವಳಿಯನ್ನು ಹಾಗೂ ವಿಶ್ವವಿದ್ಯಾಲಯದ ಉಲ್ಲಂಘನೆ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು. ಪರಾಮರ್ಶನ ಟಿಪ್ಪಣಿಯಲ್ಲಿ ಉಲ್ಲೇಖಿಸಿರುವಂತೆ ಈ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ಮಾಡಿದ್ದಲ್ಲಿ, ಲೆಕ್ಕಪರಿಶೋಧಕರ ಆಕ್ಷೇಪಣೆ ಆಗುತ್ತದೆ ಅಲ್ಲದೇ ಬೇರೆ ವಿಭಾಗದ ವಿದ್ಯಾರ್ಥಿಗಳೂ ಸಹ ಇದನ್ನೇ ನಿದರ್ಶನವಿಟ್ಟುಕೊಂಡು ಮುಂದಿನ ದಿನಗಳಲ್ಲಿ ಸೀಟನ್ನು ಹಂಚಿಕೆ ಮಾಡಲು ಕೋರುತ್ತಾರೆ ಎಂದು ತಿಳಿಸಿದರು. ಶ್ರೀ ದೊಡ್ಡೇಗೌಡ ಅವರು ಮಾತನಾಡಿ ಸಮಸ್ಯೆಯನ್ನು ಪರಿಹರಿಸಲು ಪ್ರಸ್ತುತ ವಿಭಾಗದಲ್ಲಿರುವ ಇಬ್ಬರು ಪ್ರಾಧ್ಯಾಪಕರಾದ ಸಿಂಥಿಯಾ ಮೆನೆಜಸ್ ಮತ್ತು ಪ್ರೊ: ನಾಗರಾಜ ಅವರಿಗೆ ಸಮನಾಗಿ ಇಬ್ಬರು ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಬಹುದೇ ಎಂಬುವುದರ ಬಗ್ಗೆ ಸಭೆಯು ತೀರ್ಮಾನಿಸಬಹುದು ಎಂದರು.

ಪ್ರೊ: ಸಿಂಥಿಯಾ ಮೆನೆಜಸ್ ಅವರು ಮಾತನಾಡಿ ಆಚಾರ್ಯ ಬಿ.ಸ್ಕೂಲ್ ನವರು ಸಂಶೋಧನಾ ಸಂಸ್ಥೆಯಾಗಿ ವಿಶ್ವವಿದ್ಯಾಲಯದಿಂದ ಸಂಯೋಜನೆಯನ್ನು ಪಡೆದಿರುತ್ತಾರೆ, ಆ ಕಾಲೇಜಿಗೆ ಈ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಿದಲ್ಲಿ ಸಮಸ್ಯೆಗೆ ಪರಿಹಾರ ದೊರಕಬಹುದು ಎಂದು ಸಲಹೆ ನೀಡಿದರು.

ಪ್ರೊ: ಸುರೇಶ್ ವಿ. ನಾಡಗೌಡರ್ ಅವರು ಮಾತನಾಡುತ್ತಾ ಈ ವಿಷಯವನ್ನು ಮೊದಲು ವಿದ್ಯಾವಿಷಯಕ ಪರಿಷತ್ತಿನ ಸಭೆಯ ಮುಂದೆ ಮಂಡಿಸಬೇಕಾಗಿತ್ತು, ವಿದ್ಯಾವಿಷಯಕ ಪರಿಷತ್ತಿಗೆ ಈ ತರಹದ ಶೈಕ್ಷಣಿಕ ವಿಷಯಗಳಿಗೆ ಸಲಹೆ ಹಾಗೂ ತೀರ್ಮಾನಿಸಲು ಅಧಿಕಾರವಿದೆ. ಕೌನ್ಸಲಿಂಗ್ ಸಂದರ್ಭದಲ್ಲೇ ಮೆರಿಟ್ ಇದ್ದ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆಯನ್ನು ನಿಯಮಾನುಸಾರ ಮಾಡಿದ್ದರೆ ಈಗ ಈ ಗೊಂದಲ ಸೃಷ್ಠಿಯಾಗುತ್ತಿರಲಿಲ್ಲ. ಲೋಪವನ್ನು ಆ ಸಂದರ್ಭದಲ್ಲೇ ಸರಿಪಡಿಸಿಕೊಳ್ಳಬೇಕಾಗಿತ್ತು ಎಂದು ತಿಳಿಸಿದರು. ಈಗಾಗಲೇ ಪಿಹೆಚ್.ಡಿ. ನಿಯಮದಲ್ಲಿ ಸ್ಪಷ್ಟವಾಗಿ ಸಹ ಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕ ಮತ್ತು ಪ್ರಾಧ್ಯಾಪಕರಿಗೆ ಕ್ರಮವಾಗಿ 4,6, ಮತ್ತು 8ರ ಅನುಪಾತದಲ್ಲಿ ಸಂಶೋಧನಾರ್ಥಿಗಳನ್ನು ಹಂಚಿಕೆ ಮಾಡಲು ನಿಯಮವಿರುತ್ತದೆ. ಮಾನ್ಯ ಉಚ್ಛನ್ಯಾಯಾಲಯದ ತೀರ್ಪನ್ನೂ ಸಹ ತಾವು ಪರಿಶೀಲಿಸಲಾಗಿ, ಕುಲಸಚಿವರು ಮೌಲ್ಯಮಾಪನ ಕಛೇರಿಯಿಂದ ನೀಡಿರುವ ಹಿಂಬರಹವು ಕ್ರಮಬದ್ಧವಾಗಿರುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಇನ್ನೂ ಹೆಚ್ಚಾಗಿ ಹಂಚಿಕೆ ಮಾಡಿದರೆ ಗುಣಾತ್ಮಕ ಮಾರ್ಗದರ್ಶನ ಮಾಡಲು ಕಷ್ಟವಾಗುತ್ತದೆ ಮತ್ತು ನಿಯಮಗಳನ್ನು ಉಲ್ಲಂಘಿಸಿದಂತಾಗುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ವಿದ್ಯಾವಿಷಯಕ ಪರಿಷತ್ತಿನ ವಿಷಯಗಳನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವುದು ಸರಿಯಾದ ಕ್ರಮವಲ್ಲ, ಶೈಕ್ಷಣಿಕ ವಿಚಾರಗಳನ್ನು ಶೈಕ್ಷಣಿಕ ಪರಿಷತ್ತಿನ ಸಭೆಯ ಮುಂದೆಯೇ ಮಂಡಿಸಬೇಕು, ಪರಿಷತ್ತಿನ ಘನತೆಯನ್ನೂ ಸಹ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ಸದಸ್ಯರಾದ ಡಾ:ಶೈಲಜಾ ಅವರು ಮಾತನಾಡಿ over and above ಸೀಟು ಹಂಚಿಕೆ ಮಾಡಲು ನಿಯಮಗಳಲ್ಲಿ ಅವಕಾಶವಿಲ್ಲ, ಇದೊಂದು ಕೆಟ್ಟ ಸಂಪ್ರದಾಯವನ್ನು ಸೃಷ್ಟಿಸುವುದಲ್ಲದೇ ವಿಶ್ವವಿದ್ಯಾಲಯದ ಘನತೆಗೂ ಸಹ ಕುಂದುಂಟಾಗುತ್ತದೆ ಎಂದು ತಿಳಿಸಿ, ಈ ವಿದ್ಯಾರ್ಥಿಗಳನ್ನು ಸ್ನಾತಕ ಪದವಿ ಕಾಲೇಜಿನ ಅಧ್ಯಾಪಕರಿಗೆ ವರ್ಗಾವಣೆ ಮಾಡುವ ಕುರಿತು ಚಿಂತನೆ ಮಾಡಬಹುದು ಎಂದು ಸಲಹೆ ನೀಡಿದರು.

ಸದಸ್ಯರಾದ ಪ್ರೊ: ಎನ್.ನಾರಾಯಣಸ್ವಾಮಿಯವರು ಮಾತನಾಡಿ, ವಿಷಯವನ್ನು ನಾವು ಗುಣಾತ್ಮಕತೆಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಸ್ನಾತಕೋತ್ತರ ವಿಭಾಗಗಳು ಇರುವ ಕಾಲೇಜುಗಳಿಗೆ ಈ ವಿದ್ಯಾರ್ಥಿಗಳನ್ನು ವರ್ಗಾಯಿಸುವುದು ಸೂಕ್ತ ಸಲಹೆ ಅಲ್ಲ, ವಿಚಾರವು ಮೊದಲು ಸಿಂಡಿಕೇಟ್ ಸಭೆಗೆ ಮಂಡಿಸಿ ನಂತರ ವಿದ್ಯಾವಿಷಯಕ ಪರಿಷತ್ತಿಗೆ ಮಂಡಿಸಿರುವುದು ಸರಿಯಾದ ಕ್ರಮವಲ್ಲವೆಂದು ತಿಳಿಸಿದರು.

ಸದಸ್ಯರಾದ ಪ್ರೊ:ವಿ.ವಿ. ಸುರೇಶ್‌ಬಾಬು ಅವರು ಉತ್ತರಿಸಿ ಪ್ರೊ. ಎನ್. ನಾರಾಯಣಸ್ವಾಮಿಯವರ ಅಭಿಪ್ರಾಯವು ಸರಿಯಾಗಿದ್ದು ವಿಚಾರವು ಮೊದಲು ವಿದ್ಯಾವಿಷಯಕ ಪರಿಷತ್ತಿಗೆ ಮಂಡನೆಯಾಗಬೇಕಿತ್ತು, ಇದು ಸಿಂಡಿಕೇಟ್‌ನಲ್ಲಿ ಅಜೆಂಡಾ ಆಗಿ ಬಂದಿರಲಿಲ್ಲ. ವಿದ್ಯಾರ್ಥಿಗಳ ಒತ್ತಡದಿಂದ ಶೂನ್ಯವೇಳೆ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿ ನಿರ್ಣಯಿಸಲಾಗಿರುತ್ತದೆ ಎಂದು ಉತ್ತರಿಸಿದರು.

ಸದಸ್ಯರಾದ ಪ್ರೊ: ಪಿ.ಸಿ. ಕೃಷ್ಣಸ್ವಾಮಿಯವರು ಮಾತನಾಡಿ ವಿಶ್ವವಿದ್ಯಾಲಯದ ವಿನಿಯಮಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸಬೇಕು. ಅದರ ಜೊತೆಗೆ ಸಾಕಷ್ಟು ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ OVER-AND-ABOVE ಹಂಚಿಕೆ ಮಾಡಿಕೊಂಡಿದ್ದಾರೆ, ಬೆಂಗಳೂರು ವಿಶ್ವವಿದ್ಯಾಲಯದಲ್ಲೂ ಸಹ ಹೀಗೆ ಹಲವು ಬಾರಿ 5 ರಿಂದ 7 ಕ್ಕೆ ಸಂಶೋಧನಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ, ತಮ್ಮ ಬಳಿಯೂ ಹೆಚ್ಚಿನ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಿಗೆ ದತ್ತವಾಗಿರುವ ವಿಶೇಷ ಅಧಿಕಾರದ ಹಿನ್ನೆಲೆಯಲ್ಲಿ ಇವುಗಳನ್ನು ಇತ್ಯರ್ಥಪಡಿಸಬೇಕಾಗುತ್ತದೆ. ಇದನ್ನು ಆರಂಭದಲ್ಲೇ ಮಾಡಲು ಸಾಧ್ಯವಿಲ್ಲವೆಂದು ವಿದ್ಯಾರ್ಥಿಗಳಿಗೆ ತಿಳಿಸಿದ್ದರೆ ಇಷ್ಟೊಂದು ಗೊಂದಲವೇರ್ಪಡುತ್ತಿರಲಿಲ್ಲ. ಮಾರ್ಗದರ್ಶಕರ ತಪ್ಪಿನಿಂದ ಈ ಬೆಳವಣಿಗೆಗಳು ಆಗಿದ್ದು, ಮಾನ್ಯ ಉಚ್ಚನ್ಯಾಯಾಲಯದ ತೀರ್ಪಿನಂತೆ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ವಿಶೇಷವಾಗಿ ಗಮನದದಲ್ಲಿಟ್ಟುಕೊಂಡು ವಿಷಯವನ್ನು ಪರಿಗಣಿಸಿ ಪಿ.ಹೆಚ್.ಡಿ. ಮಾಡಲು ಉತ್ಸುಕರಾಗಿರುವ ವಿದ್ಯಾರ್ಥಿಗಳಿಗೆ ಸೂಕ್ತ ಪರಿಹಾರ ನೀಡಲು ಕೋರಿದರು.

ಡಾ: ಶೈಲಜಾ ಅವರು ಮಾತನಾಡಿ ಈಗಾಗಲೇ ಪಿಹೆಚ್.ಡಿ. ಕೌನ್ಸಲಿಂಗ್ ಪ್ರಕ್ರಿಯೆಗಳು ಮುಗಿದಿರುವುದರಿಂದ, ಪ್ರಸ್ತುತ ನಾವು ಇದನ್ನು ಅನುಮೋದಿಸಿದ ಪಕ್ಷದಲ್ಲಿ ಕೋರ್ಸ್‌ವರ್ಕ್ ಇತ್ಯಾದಿ ಬಗ್ಗೆ ಕಾನೂನಾತ್ಮಕವಾಗಿ ತೊಡಕುಂಟಾಗುವುದರ ಬಗ್ಗೆ ಯೋಚಿಸಬೇಕು ಎಂದು ತಿಳಿಸಿದರು.

ಸದಸ್ಯರಾದ ಪ್ರೊ: ಕೆ.ಎಸ್.ವಿಜಯಲಕ್ಷ್ಮಿ ರವರು ಮಾತನಾಡಿ, ಈಗಾಗಲೇ ಅವರ ವಿಭಾಗದ ನಿವೃತ್ತ ಪ್ರಾಧ್ಯಾಪಕರಿಗೆ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಿರುವುದರಿಂದ ವಿದ್ಯಾರ್ಥಿಗಳು ಬಲಿಪಶುಗಳಾಗಿದ್ದಾರೆ. ಈಗಲೂ ಅವರುಗಳಿಗೆ ಕೋರ್ಸ್‌ವರ್ಕ್ ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ವ್ಯತಿರಿಕ್ತ ಪರಿಣಾಮಗಳುಂಟಾಗಿ ವಿಭಾಗದಲ್ಲಿ ಅತಿ ಬಿಗುವಿನ ವಾತಾವರಣವನ್ನು ನಿರ್ಮಿಸಿದಂತಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಪ್ರೊ:ವಿ.ವಿ. ಸುರೇಶ್‌ಬಾಬು ಅವರು ಮಾತನಾಡಿ ಈ ತರಹದ ಒಂದು ಅಥವಾ ಎರಡು ಹೆಚ್ಚುವರಿ ಪ್ರವೇಶಕ್ಕೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನೊಂದಿಗೆ ಚರ್ಚಿಸಿ ಅವರು ನೀಡಿದ ಸಲಹೆಗಳನ್ನು ಮುಂದಿನ ಶೈಕ್ಷಣಿಕ ಸಾಲುಗಳಲ್ಲಿ ವಿದ್ಯಾರ್ಥಿ ಪ್ರಮಾಣವನ್ನು ಸರಿದೂಗಿಸಿಕೊಳ್ಳಲು ಹಾಗೂ ಈ ಪ್ರಕರಣವನ್ನು ಒಂದು ಬಾರಿಯ ಅವಕಾಶವಾಗಿ ಮಾಡಬಹುದು ಎಂದು ಸಲಹೆ ನೀಡಿದರು.

ಸದಸ್ಯರಾದ ಪ್ರೊ: ತಮ್ಮಯ್ಯ ಅವರು ಮಾತನಾಡಿ ಎಲ್ಲಾ ಕಡೆಯಲ್ಲೂ ಸಹ ತಪ್ಪುಗಳು ಜರುಗಿವೆ, ನಿಯಮಗಳನ್ನು ಮೀರಿ ಈಗಾಗಲೇ ಲೋಪವಾಗಿರುತ್ತದೆ. ಇವುಗಳನ್ನು ಸರಿಪಡಿಸಿಕೊಳ್ಳಬೇಕಾದುದು ನಮ್ಮ ಜವಾಬ್ದಾರಿ ಮತ್ತು ಕರ್ತವ್ಯ. ವಿಚಾರವನ್ನು ಅಂದಿನ ದಿನಗಳಲ್ಲೇ ಸರಿಪಡಿಸಿಕೊಳ್ಳಬೇಕಾಗಿತ್ತು. ನಿವೃತ್ತಿ ಬಳಿಕ ಸೀಟು ಹಂಚಿಕೆಗೆ ಅವಕಾಶವಿಲ್ಲವೆಂದು ತಿಳಿದಿದ್ದರೂ ತಪ್ಪು ಮಾಡಲಾಗಿದೆ. ಆಚಾರ್ಯ ಬಿ.ಸ್ಕೂಲ್‌ಗೆ ಪ್ರಸ್ತುತ ಈ ವಿದ್ಯಾರ್ಥಿಗಳನ್ನು ವರ್ಗಾವಣೆ ಮಾಡಿದ್ದಲ್ಲಿ ಮತ್ತೊಂದು ತಪ್ಪನ್ನು ಎಸಗಿದಂತಾಗುತ್ತದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ರವಿ ರವರು ಮಾತನಾಡಿ, ಉಪಸಮಿತಿ ವರದಿಯಲ್ಲಿ ಸೀಟು ಖಾಲಿ ಇದೆ ಎಂದು ತಿಳಿಸಲಾಗಿದೆ. ಅದರಂತೆ ಕ್ರಮವಹಿಸಬಹುದು ಪ್ರೊ: ಸಿಂಥಿಯಾ ಮತ್ತು ಪ್ರೊ. ನಾಗರಾಜು ಅವರಿಗೆ ಹಂಚಿಕೆ ಮಾಡಬಹುದು ಎಂದು ತಮ್ಮ ಅಭಿಪ್ರಾಯ ನೀಡಿದರು.

ಪ್ರೊ: ನಾರಾಯಣ ಸ್ವಾಮಿಯವರು ಮಾತನಾಡಿ ಈ ಪ್ರಶ್ನಿತ 4 ಅಭ್ಯರ್ಥಿಗಳಿಗೆ ಪಿಹೆಚ್.ಡಿ. ಸೀಟುಗಳನ್ನು ಹಂಚಿಕೆ ಅನುಮೋದಿಸಿದ್ದಲ್ಲಿ, ಇವರಿಗಿಂತ ರ್‍ಯಾಂಕಿಗ್‌ನಲ್ಲಿ ಮೇಲಿರುವ ಅಭ್ಯರ್ಥಿಗಳಿಗೆ ನಾವು ನ್ಯಾಯಕೊಡಿಸಲೇ ಬೇಕು. ಆ ಜೇಷ್ಟತೆಯಲ್ಲಿರುವ ಇಬ್ಬರು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯನ್ನೂ ನೋಡಿಕೊಂಡು ಪೂರಕ ಚರ್ಚೆ ಮಾಡಿ ನಾವು ಎಲ್ಲರಿಗೂ ಸಮನಾಗಿ ನ್ಯಾಯ ನೀಡಲು ನಿರ್ಣಯಿಸಬೇಕು ಎಂದು ಸಭೆಯ ಗಮನಕ್ಕೆ ತಂದರು.

ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿ, ಮಾನ್ಯ ಕುಲಪತಿಗಳು ಕಾನೂನಾತ್ಮಕವಾಗಿ ಪಿಹೆಚ್.ಡಿ. ಸೀಟು ಹಂಚಿಕೆ ಮಾಡಲು ಅವಕಾಶವಿಲ್ಲ. ಮಾನ್ಯ ಉಚ್ಛನ್ಯಾಯಾಲಯದ ತೀರ್ಪಿನಲ್ಲಿ consider ಮಾಡಿ ಎಂದು ತಿಳಿಸಿರುತ್ತದೆ, ಈ ಕುರಿತು ಈಗಾಗಲೇ ದಿನಾಂಕ:08.04.2022ರಂದು ಈ ವಿದ್ಯಾರ್ಥಿಗಳಿಗೆ ಹಿಂಬರಹವನ್ನು ನೀಡಲಾಗಿರುತ್ತದೆ, ಆಚಾರ್ಯ ಬಿ.ಸ್ಕೂಲ್ ಸಂಶೋಧನಾ ಕೇಂದ್ರ ಮಾರ್ಗದರ್ಶಕರಿಗೂ ನೀಡಿದ್ದಲ್ಲಿ ಕಾನೂನಿನ ಉಲ್ಲಂಘನೆಯಾಗುತ್ತದೆ ಎಂದು ತಿಳಿಸಿದರು. ಒಟ್ಟಾಗಿ ವಿದ್ಯಾವಿಷಯಕ ಪರಿಷತ್ತಿನ ಅಭಿಪ್ರಾಯವು ನಿಯಮಗಳ ಉಲ್ಲಂಘನೆ ಮಾಡಬಾರದೆಂಬುದು ಸ್ಪಷ್ಟವಾಗಿರುತ್ತದೆ ಎಂದು ತಿಳಿಸಿದರು.

**ನಿರ್ಣಯ:**

ಸುಧೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದ ನಿರ್ವಹಣಾ (M.B.A.) ವಿಭಾಗದಲ್ಲಿನ ಪಿಹೆಚ್.ಡಿ. ಸೀಟುಗಳ ಹಂಚಿಕೆಯಲ್ಲಿ ವಿಚಾರದಲ್ಲಿ ಕುಮಾರಿ. ಅನುಪಮಾ, ಕು. ಸ್ವಪ್ನ, ಕು. ದೇವಿ ಮತ್ತು ಶ್ರೀ ಮುತ್ತುರಾಜು ಎಂಬುವವರ ಮನವಿಯ ಅನ್ವಯ ದಿನಾಂಕ 17.08.2022 ಮತ್ತು ದಿನಾಂಕ: 10.10.2022ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ರಚಿಸಿದ ಉಪಸಮಿತಿಯ ವರದಿಯನ್ನು ತಿರಸ್ಕರಿಸಲಾಯಿತು. ಮುಂದುವರೆದು, ಇವರುಗಳು ವಿಶ್ವವಿದ್ಯಾಲಯದ ವಿರುದ್ಧ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ.3610/2022 ರ ಆದೇಶವನ್ನು ಉಲ್ಲೇಖಿಸಿ, ಮಾನ್ಯ ಕುಲಸಚಿವರು ಮೌಲ್ಯಮಾಪನ ರವರು ದಿನಾಂಕ:08.04.2022 ರಂದು ನೀಡಿರುವ ಹಿಂಬರಹವು ನಿಯಮಬದ್ಧವಾಗಿರುತ್ತದೆ ಎಂದು ನಿರ್ಣಯಿಸಿತು.

**ಶೂನ್ಯ ವೇಳೆ ಚರ್ಚೆ:**

1. ಶ್ರೀ ರವಿ ಅವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ Engineering ಕಾಲೇಜನ್ನು ಪ್ರಾರಂಭ ಮಾಡುವ ಕುರಿತು ಆಗಿರುವ ಪ್ರಗತಿಯ ಬಗ್ಗೆ ವಿವರಣೆ ಕೋರಿದರು. ಮಾನ್ಯ ಕುಲಪತಿಗಳು ಉತ್ತರಿಸಿ, ಸರ್ಕಾರದ GTTC ಸಂಸ್ಥೆಯು ಕೆಲವು ಕೌಶಲ್ಯಾಧಾರಿತ B.VOC ಕೋರ್ಸುಗಳನ್ನು ವಿಶ್ವವಿದ್ಯಾಲಯದ ಸಹಯೋಗದಿಂದ ನಡೆಸಲು ಉದ್ದೇಶಿಸಿದ್ದು, ಪಠ್ಯಕ್ರಮ ಮತ್ತು ಇತರೆ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದ್ದು ಪರಿಣಿತರ ಸಮಿತಿಯನ್ನು ರಚಿಸುತ್ತಿರುವುದಾಗಿ ತಿಳಿಸಿ, ಎಲ್ಲಾ ಪಠ್ಯಕ್ರಮ ಕರಡು ವಿನಿಯಮಗಳು ಅಂತಿಮಗೊಂಡ ನಂತರ ಅವುಗಳನ್ನು ವಿದ್ಯಾವಿಷಯಕ ಸಭೆಗೆ ಮಂಡಿಸಲಾಗುವುದೆಂದು ತಿಳಿಸಿದರು. ಅವರು ಮುಂದುವರೆದು, School of Engineering ಸ್ಥಾಪಿಸುವ ಬಗ್ಗೆಯೂ ಉನ್ನತ ಮಟ್ಟದ ವಿಷಯ ಪರಿಣಿತರ ಸಮಿತಿಯನ್ನು ರಚಿಸಲಾಗುತ್ತಿದ್ದು, ಈ ಕುರಿತು ರೂಪುರೇಷಗಳು ಸಿದ್ಧವಾಗುತ್ತಿದೆ ಎಂದು ತಿಳಿಸಿದರು.

2. ಪ್ರೊ.ವಿ.ವಿ. ಸುರೇಶ್ ಬಾಬುರವರು ಮಾತನಾಡಿ ಕಳೆದ 10 ವರ್ಷದಿಂದ ನಮ್ಮ ವಿಶ್ವವಿದ್ಯಾಲಯದ ಪರೀಕ್ಷೆಗಳು ಶೈಕ್ಷಣಿಕ ವೇಳಾಪಟ್ಟಿಯಂತೆ ನಡೆಸಲಾಗುತ್ತಿರಲಿಲ್ಲ. ಆದರೆ ಇತ್ತೀಚಿನ ಪರೀಕ್ಷೆಗಳನ್ನು ಸುಸೂತ್ರವಾಗಿ ಜರುಗಿಸಲಾಗಿರುತ್ತದೆ ಇದಕ್ಕೆ ಎಲ್ಲಾ ಅಧ್ಯಾಪಕರುಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು. ಮುಂದುವರೆದು, ಸ್ನಾತಕೋತ್ತರ ಪದವಿಗಳ ಪ್ರವೇಶಾತಿಗೂ ಸಹ ಸಕಾಲದಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಪ್ರಸ್ತುತ ಶೈಕ್ಷಣಿಕ ವೇಳಾಪಟ್ಟಿ (calendar of events) ಯಂತೆ ಎಲ್ಲಾ ಪ್ರವೇಶಾತಿಗಳನ್ನು ಮುಗಿಸಬೇಕೆಂದು ತಿಳಿಸಿದರು.
3. ಪ್ರೊ: ಎಂ. ನಾರಾಯಣ ಸ್ವಾಮಿಯವರು ಮಾತನಾಡಿ ವಿಶ್ವವಿದ್ಯಾಲಯವು ಮುಂದಿನ ಘಟಿಕೋತ್ಸವದಲ್ಲಿ ಕೆಲವು ಮಹನೀಯರಿಗೆ ಅವರುಗಳ ಸಾಧನೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಲು ಪರಿಗಣಿಸಿರುವ ಕುರಿತು ವಿದ್ಯಾವಿಷಯಕ ಪರಿಷತ್ತಿನ ಸಭೆಗೂ ಸಹ ವಿಷಯವನ್ನು ಮಂಡಿಸಿದ್ದಲ್ಲಿ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರೂ ಸಹ ಈ ವಿಚಾರದಲ್ಲಿ ತಮ್ಮ ಸಲಹೆ ಸೂಚನೆಗಳನ್ನು ನೀಡಲು ಅವಕಾಶ ಕಲ್ಪಿಸಿದಂತಾಗುತ್ತದೆಂದು ಸಲಹೆ ನೀಡಿದರು.
4. ಡಾ. ಕೆ.ಎಂ. ಮಹೇಶ್ವರಯ್ಯ ಅವರು ಮಾತನಾಡಿ, ವಿಶ್ವವಿದ್ಯಾಲಯದಿಂದ ಈಗಾಗಲೇ ಹೊರಡಿಸಿರುವ one time measure ಬಗ್ಗೆ ಇದುವರೆವಿಗೂ ಪರೀಕ್ಷಾ ವಿಭಾಗದಿಂದ ವಿಷಯಗಳ ಸಮಾನಾಂತರದ ಬಗ್ಗೆ ಅಧಿಸೂಚನೆ ಆಗಿರುವುದಿಲ್ಲ, 2004ರಿಂದ ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶವಾಗಿ ಈ ನಿರ್ಣಯವನ್ನು ಹಿಂದಿನ ಸಭೆಯಲ್ಲಿ ತೆಗೆದುಕೊಳ್ಳಲಾಗಿದೆ. ಈ ಕುರಿತು ವಿದ್ಯಾರ್ಥಿಗಳಿಗೆ ಎರಡು ಅವಕಾಶವನ್ನು ನೀಡಲು ಕೂಡಲೇ ಅಧಿಸೂಚನೆಯನ್ನು ನೀಡಿ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶ ನೀಡಬೇಕು ಎಂದು ತಿಳಿಸಿದರು. ಕುಲಸಚಿವರು (ಮೌಲ್ಯಮಾಪನ) ಅವರು ಮಾತನಾಡಿ ಈ ಕುರಿತು ಎರಡು ಪರೀಕ್ಷೆಗಳನ್ನು ನೀಡಲು ಕ್ರಮವಹಿಸಲಾಗುವುದೆಂದು ಉತ್ತರಿಸಿದರು.
5. ಶ್ರೀ ರವಿ ಅವರು ಮಾತನಾಡಿ ವಿಶ್ವವಿದ್ಯಾಲಯದಿಂದ ಕೆಲವು ಸಮಿತಿಗಳು ರಚಿಸಿದ್ದು, ಇದುವರೆವಿಗೂ ಯಾವುದೇ ಸಭೆಗಳನ್ನು ನಡೆಸಿರುವುದಿಲ್ಲ, ಕೊನೆಯ ಪಕ್ಷ ಮೂರು ಅಥವಾ 6 ತಿಂಗಳಿಗೊಮ್ಮೆ ಸಮಿತಿ ಸಭೆ ಕರೆಯಲು ಕ್ರಮವಹಿಸಿ ಎಂದು ಸಲಹೆ ನೀಡಿದರು. ಮುಂದುವರೆದು, 2023-24ನೇ ಸಾಲಿನ ಕಾಲೇಜಿಗಳ ಪರಿವೀಕ್ಷಣೆಗೂ ಸಹ ಸಕಾಲದಲ್ಲಿ ಅಧಿಸೂಚನೆಯನ್ನು ಹೊರಡಿಸಲು ಕೋರಿದರು. ಮಾನ್ಯ ಕುಲಪತಿಗಳು ಈ ಕುರಿತು ಅಗತ್ಯಕ್ರಮ ವಹಿಸುತ್ತೇವೆ ಎಂದು ಉತ್ತರಿಸಿದರು.
6. ಕೆಲವು ಸದಸ್ಯರು ಮಾತನಾಡಿ ಮೊದಲ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು ಇದುವರೆವಿಗೂ ನೀಡಿರುವುದಿಲ್ಲ. ಈ ಕುರಿತು ಶೀಘ್ರವೇ ಫಲಿತಾಂಶವನ್ನು ನೀಡಲು ಕೋರಿದರು. ಕುಲಸಚಿವರು (ಮೌಲ್ಯಮಾಪನ)ರವರು ಮಾತನಾಡಿ, ಈ ಬಗ್ಗೆ ಸರ್ಕಾರದ UUCMS ಪೋರ್ಟಲ್‌ನ back-end ನಲ್ಲಿ BBA ಮತ್ತು BCA ಪರೀಕ್ಷೆಗೆ ಸಂಬಂಧಿಸಿದ ದತ್ತಾಂಶಗಳನ್ನು ನಮೂದು ಮಾಡಲು ಸರ್ಕಾರದವರು ಅವಕಾಶ ಕಲ್ಪಿಸಿರುತ್ತಾರೆ. ಈಗಾಗಾಲೇ ನಾವು ಈ ಬಗ್ಗೆ ಕಾರ್ಯೋನ್ಮುಖವಾಗಿದ್ದು, ಇದು ಫಲಪ್ರದವಾದ ಪಕ್ಷದಲ್ಲಿ ಮುಂದಿನ ಒಂದು ವಾರದಲ್ಲಿ ಎಲ್ಲಾ ಪರೀಕ್ಷೆಯ ಫಲಿತಾಂಶಗಳನ್ನು ಪ್ರಕಟಿಸಲಾಗುವುದೆಂದು ತಿಳಿಸಿದರು.
7. ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ವಿಶ್ವವಿದ್ಯಾಲಯದ ಆವರಣದಲ್ಲಿ ಗಣಿತಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯ ಆಕಸ್ಮಿಕ ಅಪಘಾತದಿಂದ ವಿದ್ಯಾರ್ಥಿನಿಯ ನಿಧನ ಹೊಂದಿರುತ್ತಾರೆ. ಈ ಕುರಿತು ಆಡಳಿತವರ್ಗವು ವಿದ್ಯಾರ್ಥಿಗಳಿಗೆ ಹಾಗೂ ಇಲ್ಲಿನ ಸಿಬ್ಬಂದಿ ವರ್ಗಕ್ಕೆ APL/BPL ಕಾರ್ಡಿನ ಜೊತೆಗೆ ಉಚಿತ ಆರೋಗ್ಯ ವಿಮೆ ಮಾಡಿಸುವ ಕಾರ್ಯಕ್ರಮವನ್ನು ರೂಪಿಸಿರುತ್ತದೆ. ಇದರ ಸದುಪಯೋಗವನ್ನು ಈಗಾಗಲೇ ನಮ್ಮ ವಿದ್ಯಾರ್ಥಿಗಳು ಪಡೆದುಕೊಳ್ಳಲು ತಮ್ಮ ಹೆಸರುಗಳನ್ನು ನೋಂದಣಿ ಮಾಡಿಸುತ್ತಿರುತ್ತಾರೆ ಎಂದು ತಿಳಿಸಿದರು.

೮. ಕುಲಸಚಿವರು (ಮೌಲ್ಯಮಾಪನ) ರವರು ಮಾತನಾಡಿ, ಮುಂಬರುವ ಡಿಸೆಂಬರ್ 2022ರಲ್ಲಿ ನಡೆಸಲಾಗುವ 3ನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ತಮ್ಮ 1ನೇ ಸೆಮಿಸ್ಟರ್ ವಿಷಯಗಳಲ್ಲಿ ಏನಾದರೂ ಅನುತ್ತೀರ್ಣಗೊಂಡಿದ್ದರೆ ಅಂತಹ ವಿದ್ಯಾರ್ಥಿಗಳಿಗೆ 1 ಮತ್ತು 3ನೇ ಸೆಮಿಸ್ಟರ್ ಪರೀಕ್ಷೆಗಳನ್ನು ಬರೆಯಲು ಅವಕಾಶ ಮಾಡಿಕೊಡುವ ಬಗ್ಗೆ ಸಲಹೆ ಕೋರಿದರು. ಸದಸ್ಯರೆಲ್ಲರೂ 1ನೇ ಸೆಮಿಸ್ಟರ್ ಪರೀಕ್ಷೆಗಳು ಫಲಿತಾಂಶಗಳು ಪ್ರಕಟಿಸಿಲ್ಲವಾದ್ದರಿಂದ ಅಂತಹ ವಿದ್ಯಾರ್ಥಿಗಳಿಗೆ ಕಾಲೇಜಿನ ಮಟ್ಟದಲ್ಲೇ ವ್ಯವಸ್ಥೆಯನ್ನು ಕಲ್ಪಿಸಿ ಪರೀಕ್ಷೆಗಳನ್ನು ಬರೆಯಲು ಅನುವು ಮಾಡಿಕೊಡಲು ಸಭೆಯು ನಿರ್ಣಯಿಸಿತು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

30/11/22

ಕುಲಸಚಿವರು

ಕುಲಪತಿಯವರು



B.U.P.G.W.D. No 9626. 120 Copies. Dec. 2022